211

158ನೇ ಮುಖ

# ಕರ್ನಾಟಕ ವಿಧಾನ ಪರಿಷತ್ತು

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಅಡಗೂರು ಹೆಚ್ ವಿಶ್ವನಾಥ್** (ನಾಮನಿರ್ದೇಶನ ಹೊಂದಿದವರು) ಇವರು ನಿಯಮ 72 ರಡಿ ನೀಡಿರುವ ಗಮನ ಸೆಳೆಯುವ ಸೂಚನೆ ಬಗ್ಗೆ

ವಿಷಯ:

ರಾಜ್ಯದಲ್ಲಿ ಗ್ರಂಥಾಲಯಗಳ ಅಭಿವೃದ್ಧಿಯ ಸಲುವಾಗಿ ಯಾವ ಯಾವ ರೀತಿಯಲ್ಲಿ ಆರ್ಥಿಕ ವ್ಯವಸ್ಥೆಯನ್ನು ಕ್ರೋಢೀಕರಿಸಿ ಬಂದ ಧನವನ್ನು ವಿವಿಧ ಬಾಬುಗಳಿಗೆ ವೆಚ್ಚ ಮಾಡಲಾಗುತ್ತಿದೆ ಮತ್ತು ರಾಜ್ಯದ ಪುಸ್ತಕ ಪ್ರಕಾಶಕರಿಗೆ ಇಲಾಖೆ ಕೊಡಬೇಕಾಗಿರುವ ಬಾಕಿ ಎಷ್ಟು? ಅಂತಹ ಬಾಕಿಯನ್ನು ಯಾವಾಗ ತಿರುವಳಿ ಮಾಡಲಾಗುತ್ತದೆ. .

**ಉತ್ತರ**

ಗ್ರಂಥಾಲಯಗಳ ಅಭಿವೃದ್ಧಿಗಾಗಿ ಆರ್ಥಿಕ ವ್ಯವಸ್ಥೆಯನ್ನು ಕ್ರೋಢೀಕರಿಸಲು ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965, ನಿಯಮ 30 (1) ರನ್ವಯ ಎಲ್ಲಾ ಸ್ಥಳೀಯ ಸಂಸ್ಥೆಗಳು ಸಾರ್ವಜನಿಕರಿಂದ ವಸೂಲಿ ಮಾಡುವ ಆಸ್ತಿ ತೆರಿಗೆಯಲ್ಲಿ ಗ್ರಂಥಾಲಯ ಕರವನ್ನು ಸರ್ಚಾರ್ಜ್ ರೂಪದಲ್ಲಿ ಶೇ. 6% ರಂತೆ ಆಕರಿಸಲಾಗುತ್ತಿದೆ. ಹೀಗೆ ವಸೂಲಿ ಮಾಡುವ ಆಸ್ತಿ ತೆರಿಗೆಗಳ ಮೇಲೆ ಸಂಗ್ರಹಿಸಲಾಗುವ ಗ್ರಂಥಾಲಯ ಕರವಲ್ಲಿ ಶೇ.10% ನ್ನು ಸಂಗ್ರಹಣಾ ವೆಚ್ಚವಾಗಿ ಸ್ಥಳೀಯ ಸಂಸ್ಥೆಗಳು ಕಡಿತಗೊಳಿಸಿಕೊಂಡು ಉಳಿದ ಮೊತ್ತವನ್ನು ಸಂಬಂಧಿಸಿದ ಜಿಲ್ಲಾ ಹಾಗೂ ನಗರ ಗ್ರಂಥಾಲಯ ಪ್ರಾಧಿಕಾರಗಳಿಗೆ ಸಂದಾಯ ಮಾಡುತ್ತಿರುವ ಮುಖಾಂತರ ಮೊತ್ತ ಕ್ರೋಢೀಕರಣಗೊಳ್ಳುತ್ತಿದೆ.

ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1965, ನಿಯಮ 31 ರನ್ವಯ ಆಯಾ ಜಿಲ್ಲೆಯಲ್ಲಿ ಆರ್ಥಿಕ ವರ್ಷದಲ್ಲಿ ಸಂಗ್ರಹವಾದ ಭೂಕಂದಾಯದ ಮೇಲೆ ಶೇ.6% ರಂತೆ ಸರ್ಕಾರದಿಂದ ಸಹಾಯಾನುದಾನವನ್ನು ಪಡೆಯಲಾಗುತ್ತಿದೆ ಹಾಗೂ ನಗರ ಗ್ರಂಥಾಲಯ ಪ್ರಾಧಿಕಾರಗಳಿಗೆ ಆಕ್ಟ್ರಾಯ್ ರದ್ದಾದ ಪ್ರಯುಕ್ತ ಆಕ್ಟ್ರಾಯ್ ಪರಿಹಾರ ಮೊತ್ತವನ್ನು ಸರ್ಕಾರದಿಂದ ಸಹಾಯಾನುದಾನವಾಗಿ ಪಡೆಯಲಾಗುತ್ತಿದೆ.

ಇದಲ್ಲದೆ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಲೆಕ್ಕಪತ್ರ ನಿಯಮಗಳು 1975 ನಿಯಮ 41 ರನ್ವಯ ಪುಸ್ತಕ ಎರವಲು ಪಡೆಯುವ ಸದಸ್ಯರಿಂದ ಸಂಗ್ರಹಿಸುವ ಎಚ್ಚರಿಕೆ ಠೇವಣಿ ಮೊತ್ತ (Caution Money Deposit) ದಿಂದ ಸಂಗ್ರಹವಾಗುವ ಒಟ್ಟಾರೆ ಮೊತ್ತವನ್ನು ನಿಯಮ 65 ರನುಸಾರ ಬ್ಯಾಂಕಿನಲ್ಲಿ ಮುದ್ದತ ಠೇವಣಿಯಾಗಿ (Fixed Deposit) ಇರಿಸಿದ ಹಣ ಹೂಡಿಕೆಗಳಿಂದ ಬರುವ ಬಡ್ಡಿ ಮೊತ್ತ ಹಾಗೂ ನಿಯಮ 42 ರನುಸಾರ ಜುಲ್ಮಾನೆ ಮತ್ತು ವಸೂಲಾತಿಗಳಿಂದ, ನಿಯಮ 43 ರನುಸಾರ ಹಳೇ ವೃತ್ತ ಪತ್ರಿಕೆಗಳು, ನಿಯತಕಾಲಿಕೆಗಳು ಮತ್ತು ಬಳಸಿದ ಇತರೆ ವಸ್ತುಗಳ ಮಾರಾಟದಿಂದ ಬರುವ ಸ್ವೀಕೃತಿಗಳಿಂದ ಆರ್ಥಿಕ

ಸಂಪನ್ಮೂಲವನ್ನು ಕ್ರೂಢೀಕರಿಸಲಾಗುತ್ತದೆ.

ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಕಾಯ್ದೆ 1965 ಹಾಗೂ ಸಾರ್ವಜನಿಕ ಗ್ರಂಥಾಲಯ ಇಲಾಖೆ **ಲೆಕ್ಕಪತ್ರಗಳ ನಿಯಮಗಳು** 1975 ರ ನಿಯಮ ಗಳಲ್ಲಿನ ಅವಕಾಶದಂತೆ ಜಿಲ್ಲಾ ಹಾಗೂ ನಗರ ಗ್ರಂಥಾಲಯಗಳು ಆರ್ಥಿಕ ವರ್ಷದಲ್ಲಿ ಸಂಗ್ರಹಿಸಿದ ಒಟ್ಟಾರೆ ಮೊತ್ತವನ್ನು ವೆಚ್ಚ ಮಾಡುವ ಕುರಿತಂತೆ ವಾರ್ಷಿಕ ಅಂದಾಜು ಆಯವ್ಯಯಗಳನ್ನು ಇಲಾಖಾ ಲೆಕ್ಕಪತ್ರ ನಿಯಮ 1975 ರ ನಿಯಮ 3 0 ರನುಸಾರ ಸಿದ್ಧಪಡಿಸಿ ಕರ್ನಾಟಕ ಸಾರ್ವಜನಿಕ ಗ್ರಂಥಾಲಯ ಕಾಯ್ದೆ 1 9 6 5 ರ ನಿಯಮ 1 7 ರನುಸಾರ ರಚಿತವಾದ ನಗರ ಗ್ರಂಥಾಲಯ ಪ್ರಾಧಿಕಾರ ಹಾಗೂ ನಿಯಮ 1 8 ರನುಸಾರ ರಚಿತವಾದ ಜಿಲ್ಲಾ ಗ್ರಂಥಾಲಯ ಪ್ರಾಧಿಕಾರಗಳಲ್ಲಿ ಆಯವ್ಯಯ ಅಂದಾಜುಗಳ ಸಭೆ ಜರುಗಿಸಿ ಆಯವ್ಯಯವನ್ನು ಮಂಡಿಸಲಾಗುತ್ತದೆ.

ಒಟ್ಟಾರೆ ಜಿಲ್ಲಾ ಹಾಗೂ ನಗರ ಗ್ರಂಥಾಲಯ ಪ್ರಾಧಿಕಾರಗಳು ಆಯಾ ಆರ್ಥಿಕ ವರ್ಷದಲ್ಲಿ ವಸೂಲಿಯಾಗುವ ಉಪಕರದ ಮೊತ್ತದಿಂದ ಲೆಕ್ಕಪತ್ರ ನಿಯಮಗಳು 1 9 7 5 ರ ನಿಯಮ 47ರ ತಿದ್ದುಪಡಿಯನುಸಾರ ಶೇಕಡಾವಾರು ನಿಗಧಿಪಡಿಸಲಾದಂತೆ, ವೆಚ್ಚಗಳನ್ನು ಭರಿಸಲಾಗುತ್ತದೆ.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯಿಂದ ಆಯ್ಕೆಯಾದ 2 0 2 0 ರಲ್ಲಿ ಮುದ್ರಣಗೊಂಡ ಪುಸ್ತಕಗಳನ್ನು ಖರೀದಿಸಲು 2023-24ನೇ ಸಾಲಿನಲ್ಲಿ ಖರೀದಿ ಆದೇಶಗಳನ್ನು ನೀಡಲಾಗಿರುತ್ತದೆ. ಸದರಿ ಖರೀದಿ ಆದೇಶದನುಸಾರ ಸರಬರಾಜು ಮಾಡಲಾದ ಪ್ರಕಾಶಕರು ಮತ್ತು ಲೇಖಕರುಗಳಿಗೆ ಪಾವತಿಸಬೇಕಾದ ಬಾಕಿ ಬಿಲ್ಲುಗಳ ಮೊತ್ತ ರೂ.6,86,65,345/- (ರೂಪಾಯಿಗಳು ಆರು ಕೋಟಿ ಎಂಭತ್ತಾರು ಲಕ್ಷದ ಅರವತ್ತೈದು ಸಾವಿರದ ಮೂರು ನೂರ ನಲವತ್ತೈದು) ಗಳಷ್ಟಿದ್ದು, ಸದರಿ ಮೊತ್ತವನ್ನು ಪಾವತಿಸಲು 2025-26ನೇ ಸಾಲಿನ ಸಂಚಿತನಿಧಿ ಆಯವ್ಯಯದಲ್ಲಿ ಸಾರ್ವಜನಿಕ ಗ್ರಂಥಾಲಯ ಇಲಾಖೆಗೆ ನಿಗಧಿಪಡಿಸಲಾದ ಅನುದಾನದಲ್ಲಿ ಪಾವತಿ ಮಾಡಲು ಅವಕಾಶ ಕಲ್ಪಿಸಿಕೊಂಡು ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಅನುಮೋದನೆಗಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಕೆಯಾಗಿದ್ದು, ಪ್ರಸ್ತುತ ಪರಿಶೀಲನೆಯಲ್ಲಿದೆ

**ಸಂಖ್ಯೆ: ಇಪಿ/ 45 /ಎಲ್‌ಐಬಿ /2026**

**(ಎಸ್. ಮಧು ಬಂಗಾರಪ್ಪ)**
**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ**
ಸಚಿವರು